# ಹೊಸಗನ್ನಡದ ಆರಂಭಿಕ ಕತೆಗಳು

**ಪ್ರವೀಣ್ ಕುಮಾರ್ ಎಸ್.**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸಮಾಜವಿಜ್ಞಾನ ಮತ್ತು ಮಾನವಿಕ ಶಿಕ್ಷಣ ವಿಭಾಗ
ಪ್ರಾದೇಶಿಕ ಶಿಕ್ಷಣ ಸಂಸ್ಥೆ, ಎನ್.ಸಿ.ಇ.ಆರ್.ಟಿ.,
ಮೈಸೂರು.

**Article Link: https://aksharasurya.com/2024/04/praveen-kumar-s-3.php**

**DOI: https://doi.org/10.5281/zenodo.10938075**

## ABSTRACT:

ಕನ್ನಡ ಸಾಹಿತ್ಯ ಲೋಕ ಹಲವಾರು ಪ್ರಕಾರಗಳ ಮೂಲಕ ಮಹತ್ವವನ್ನು ಪಡೆದಿದೆ. ಪ್ರಸ್ತುತ ಲೇಖನವು ನವೋದಯ ಪೂರ್ವ, ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಎಲ್ಲಾ ಕಾಲಘಟ್ಟಗಳಲ್ಲಿಯೂ ಕನ್ನಡದ ಕತೆಗಾರರು ತಮ್ಮ ಕಥಾಬರವಣಿಗೆಯ ಮೂಲಕ ಕಥಾಲೋಕವನ್ನು ಹಾಗೂ ಸಾಹಿತ್ಯಲೋಕವನ್ನು ವಿಸ್ತರಿಸಿದ್ದಾರೆ. ಆದರೆ, ಹೊಸಗನ್ನಡದ ಆರಂಭಿಕ ಬರಹಗಾರರ ಕಥೆಗಳ ವಸ್ತು ಆಲೋಚನ ಕ್ರಮ ಹಾಗೂ ಉದ್ದೇಶಗಳನ್ನು ಅರ್ಥೈಸಿಕೊಳ್ಳದೆ ನಂತರದ ಕಥೆ ಗಳನ್ನು ಅಭ್ಯಾಸ ಮಾಡಿದರೆ ಕನ್ನಡ ಕಥಾ ಸಾಹಿತ್ಯದ ಸಂಪೂರ್ಣ ಅರಿವು ಆಗುವುದಿಲ್ಲ. ಹಾಗಾಗಿ, ಈ ಲೇಖನದಲ್ಲಿ ಪ್ರಾರಂಭದ ಕಥೆಗಾರರ ಕೆಲವು ಕಥೆ ಗಳ ಚರ್ಚೆಯನ್ನು ಮಾಡಲಾಗಿದೆ.

## KEYWORDS:

ಕಾಲಘಟ್ಟ, ಆಲೋಚನ ಕ್ರಮ, ವೈಚಾರಿಕತೆ, ಕಥಾವಸ್ತು, ಭಾಷಾಂತರ, ಅಸಂಗತವಾದ.

ಕನ್ನಡ ಸಾಹಿತ್ಯ ವಿಭಿನ್ನ ಪ್ರಕಾರಗಳ ಮೂಲಕ ಜನ ಮಾನಸದಲ್ಲಿ ತನ್ನ ಮಹತ್ತರತೆಯನ್ನು ಸಾಬೀತುಪಡಿಸುತ್ತಲೇ ಬಂದಿದೆ. ಕಥಾಸಾಹಿತ್ಯವು ಇದಕ್ಕೆ ಹೊರತಲ್ಲ. ಆರಂಭದ ನವೋದಯ ಪೂರ್ವ ನವೋದಯ ಪ್ರಗತಿಶೀಲ ನವ್ಯ ದಲಿತ ಬಂಡಾಯ ಹೀಗೆ ಸಾಹಿತ್ಯದ ಎಲ್ಲಾ ಕಾಲಘಟ್ಟದಲ್ಲಿಯೂ, ಎಲ್ಲಾ ನಿರೂಪಕರ ಉದ್ದೇಶ ಸಮಾಜದ ಸ್ವಾಸ್ತ್ಯವನ್ನು ಕಾಪಾಡುವುದೇ ಆಗಿದೆ. ಈ ಹಿನ್ನಲೆಯಲ್ಲಿ "ಕನ್ನಡದಲ್ಲಿ ಆರಂಭದಲ್ಲಿ ರಚಿತಗೊಂಡ ಕಥೆಗಳು ನೀತಿ ಕಥೆಗಳಾಗಿದ್ದವು" (ಶ್ರೀನಿವಾಸ ಹಾವನೂರು, ಹೊಸಗನ್ನಡ ಅರುಣೋದಯ) ಎಂಬ ಅಂಶ ಕಥೆ

ಗಳ ಹುಟ್ಟು ಮತ್ತು ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ. ನಂತರದ ಪ್ರಗತಿಶೀಲರಲ್ಲಿ ಪ್ರತಿರೋಧಗಳು, ಪ್ರತಿವಾದಗಳು, ತುಳಿತಕ್ಕೊಳಗಾದವರ ಧ್ವನಿ ಹೋಗಿ, ಕಥೆಗಳು ನವ್ಯದ ಕಥೆಗಾರರಲ್ಲಿ ವಿಷಯ ವಸ್ತು ವಿಭಿನ್ನಗೊಂಡಿತು. ದಲಿತ ಬಂಡಾಯ ಸಾಹಿತ್ಯ ಕಾಲಘಟ್ಟದಲ್ಲಿ ದಲಿತ ಸಂವೇದನೆ, ಮಹಿಳಾ, ಮುಸ್ಲಿಂ ಸಂವೇದನೆಗಳ ಮೂಲಕ ಕಥೆಗಾರೊಡನೆ ಕಥೆಗಾರ್ತಿಯರೂ ಮುನ್ನಡೆಗೆ ಬಂದರು. ಈ ಲೇಖನದಲ್ಲಿ ಪ್ರಾರಂಭದ ಕಥೆಗಾರರ ಕೆಲವು ಕಥೆಗಳ ಚರ್ಚೆಯನ್ನು ಮಾಡಲಾಗಿದೆ.

ಪ್ರಗತಿಶೀಲ ಕತೆಗಳ ಕತೆಗಾರರ ಪರಿಚಯ ಹಾಗೂ ವಿಮರ್ಶೆ ಎಂದರೆ ಕೊರಡ್ಕಲ್ ಶ್ರೀನಿವಾಸರಾಯರು, ಜಯತೀರ್ಥರಾಜ ಪುರೋಹಿತ, ಬಸವರಾಜ ಕಟ್ಟೀಮನಿ, ತರಾಸು, ನಿರಂಜನ, ಭಾರತೀಪ್ರಿಯ, ಚದುರಂಗ ಅನುಪಮ ಹಾಗೂ ನವ್ಯಕತೆಗಾರರಾದ ಅನಂತಮೂರ್ತಿ, ಚಿತ್ತಾಲರು, ಶಾಂತಿನಾಥ ದೇಸಾಯಿ, ಲಂಕೇಶ, ತೇಜಸ್ವಿ, ರಾಮಚಂದ್ರ ಶರ್ಮ, ಆಲನಹಳ್ಳಿ ಕೃಷ್ಣ, ದೇವನೂರ ಮಹಾದೇವರು ಪ್ರಮುಖ ಕತೆಗಾರರಾಗಿದ್ದಾರೆ.

ಮುಂದುವರೆದು ಬಂಡಾಯ ಕತೆಗಳಲ್ಲಿ ಕುಂ. ವೀ, ವೀಣಾ ಶಾಂತೇಶ್ವರ, ಅಮರೇಶ ನುಗಡೋಣಿ, ಬೊಳುವಾರರ ಕತೆಗಳು ಮತ್ತು ಮಹಿಳಾ ಕತೆಗಳನ್ನು ಅವುಗಳನ್ನು ನೆಲೆಗಳನ್ನು ಶೋಧಿಸುವ ಪ್ರಯತ್ನ ಕತೆಗಳ ಹಿನ್ನೆಲೆಯಲ್ಲಿ ಆಗಬೇಕಿದೆ.

ಮಹಿಳಾ ಕತೆಗಳ ನೆಲೆಗಳು:

ಸ್ತ್ರೀ ಸಂವೇದನೆ ಮತ್ತು ಮುಸ್ಲಿಂ ಸಂವೇದನೆ, ಗ್ರಾಮೀಣ ಸಂವೇದನೆ ಹಿನ್ನೆಲೆಯಲ್ಲಿನ ಕತೆಗಳನ್ನು ವಿಮರ್ಶಾಲೋಕ ಕಥೆಗಾರರ ಬರಹದ ಗಟ್ಟಿತನವನ್ನು ಮತ್ತಷ್ಟು ಓರೆಹಚ್ಚಿದೆ. ಸಾರಾ ಅಬೂಬಕರ್ ಅವರ ‘ಚಪ್ಪಲಿಗಳು’ ಕತೆಯನ್ನು ಬಹಳ ಪ್ರಮುಖವಾಗಿ ಚರ್ಚಿಸಬೇಕಾಗಿದೆ. ಬಾನು ಮುಷ್ತಾಕರ ಕತೆಗಳಲ್ಲಿ ಪುರುಷ ಮತ್ತು ಸ್ತ್ರೀ ಸಂಬಂಧಗಳನ್ನು ವಿವೇಚನೆಯನ್ನು ಗಮನಿಸಬೇಕಾಗಿದೆ.

ವೈದೇಹಿ ಅವರ ಕತೆಗಳನ್ನು ಹೊರತುಪಡಿಸಿ ಅಂದಿನ ಸ್ತ್ರೀವಾದಿ ನಿಲುವುಗಳನ್ನು ಅವಲೋಕಿಸಲು ಸಾಧ್ಯವಿಲ್ಲ. ಇವರ ಕತೆಗಳಲ್ಲಿ ವ್ಯಕ್ತವಾದ ಬ್ರಾಹ್ಮಣ ಕೌಟುಂಬಿಕ ಪರಿಸರ, ಶಿಕ್ಷಣ, ಹೆಣ್ಣಿನ ಬದುಕಿನ ವಿವಿಧ ಮಜಲುಗಳು, ಹೆಣ್ಣಿನ ಹಂಬಲ, ನಗರ ಗ್ರಾಮಗಳಲ್ಲಿನ ಚಿತ್ರಣದ ವ್ಯತ್ಯಾಸ, ಗಂಡನನ್ನು ಬಿಟ್ಟು ತವರಿಗೆ ಬರುವ ‘ಕುಸುಮ’, ಕೃತಕ ಸ್ವಾತಂತ್ರ್ಯ ಅನುಭವಿಸುವ ‘ಮಾಲತಿ’, ವ್ಯವಸ್ಥೆಯೊಳಗೆ ನಲುಗುವ ‘ಅಕ್ಕು’, ಪಿತೃಪ್ರಧಾನ ವ್ಯವಸ್ಥೆ ಪ್ರಶ್ನಿಸುವ ‘ವಾಣಿ ಮಾಯಿ’ ಹೀಗೆ ಆ ಕತೆಗಳ ಸಾರ ರೂಪುಗೊಳ್ಳುತ್ತದೆ.

ಸಾರಾ ಅಬೂಬಕರ್ ಅವರು ಬರೆದ 'ಚಪ್ಪಲಿಗಳು' ಕೃತಿಯನ್ನು ಓದುಗ ಓದಿರದಿದ್ದರೆ ಆ ಕತೆಯ ಬಗೆಗಿನ ಚರ್ಚೆ ಆತನಿಗೆ ದಕ್ಕುವುದಿಲ್ಲ. ಮುಸ್ಲಿಂ ಸಂವೇದನೆ ಎಂದರೇನು, ಸ್ತ್ರೀವಾದಿ ನಿಲುವುಗಳೇನು, ಮುಸ್ಲಿಂ ಸಮುದಾಯದ ಆಚರಣೆ ಮತ್ತು ಮನಸ್ಥಿತಿಗಳು ಅರ್ಥವಾಗದೆ ಚಪ್ಪಲಿಗಳು ಕತೆಯನ್ನು ಓದಲಿಕ್ಕಾಗುವುದಿಲ್ಲ.

ಆನಂದರು ಬರೆದ 'ರಾಧೆಯ ಕ್ಷಮೆ' ಕತೆಯನ್ನು ಓದದೆ ಕತೆಯ ವಿಮರ್ಶೆ ಓದುಗನಿಗೆ ಅರ್ಥವಾಗಲಾರದು. ರಾಧೆಯ ಕ್ಷಮೆ ಕತೆಯಲ್ಲಿ ಚಿತ್ರ ಬರೆಯುವೆನೆಂದು ಹೊರಟ ನಾಯಕನಿಗೆ ಚಿತ್ರ ಹಾಳಾದ್ದರಿಂದ ಆತ ಹೆಂಡತಿಯನ್ನು ಬೈಯ್ಯುವ ಮೂಲಕ ತಾನು ಸತ್ತೆ, ಶ್ರಾದ್ಧ ಮಾಡು ಎನ್ನುತ್ತಾನೆ. ಆನಂತರ ಕೋಪ ಇಳಿದಾಗ ತಾನು ಆತುರಪಟ್ಟೆನೆಂದು ತನ್ನ ತಪ್ಪಿನ ಅರಿವಾಗಿ ಹೆಂಡತಿಯ ಬಳಿ ಕ್ಷಮೆ ಕೇಳಲು ಮೊದಲಾಗಿ ರಾಧೆಯ ಮುಖದ ಜಾಗದಲ್ಲಿ ತನ್ನ ಹೆಂಡತಿಯ ಮುಖದ ಚಿತ್ರ ಬರೆದು ಕ್ಷಮೆ ಕೋರುತ್ತಾನೆ.

ಭಾರತೀಪ್ರಿಯರು ಬರೆದ ಮೋಚಿ ಕತೆಯನ್ನು ಈವರೆಗೂ ಸಾಹಿತ್ಯಲೋಕ ಗ್ರಹಿಸಿದ ಕ್ರಮವೆಂದರೆ, ಚಪ್ಪಲಿ ಹೊಲಿಯುವ ಮೋಚಿ ತಾನು ಮಾಡಿದ ಕೆಲಸಕ್ಕೆ ಮಾತ್ರ ಕೂಲಿ ಪಡೆಯುತ್ತಾನೆ. ಆದರೆ ಕಥಾನಾಯಕ ಮೋಚಿ ಬಡತನ ನೋಡಿ ಆತನಿಗೆ ಸಹಾಯ ಮಾಡಲು ಮುಂದಾಗುತ್ತಾನೆ. ಇದರಿಂದ ಮೋಚಿ ತನ್ನ ಸ್ವಾವಲಂಬನೆ ಹಿನ್ನೆಲೆಯಲ್ಲಿ ಊರನ್ನು ಬಿಟ್ಟು ಹೋಗುತ್ತಾನೆ ಎಂದು. ಆದರೆ ಓದುಗರು ಕೇವಲ ಕಥಾವಸ್ತುವಿಗೆ ಗಮನ ಕೊಡುವುದರ ಜೊತೆಗೆ ಕತೆಯಲ್ಲಿ ಬಂದಿರುವ ಸಂಭಾಷಣೆಗೆ ಗಮನ ನೀಡಬೇಕು. ಆಗ ಮಾತ್ರ ಈ ಕತೆ ನಿಜವಾಗಿ ಅರ್ಥವಂತಿಕೆ ಪಡೆಯುತ್ತದೆ.

ಮಾಸ್ತಿ ಅವರ ಕತೆಗಳ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಮಾಸ್ತಿ ಬರಹದ ಹಿನ್ನೆಲೆ ಅವರ ಬದುಕಿನ ಅಭಿವ್ಯಕ್ತಿಗೆ ಕತೆಯು ಮಾಧ್ಯಮವಾಯಿತು ಎಂಬುದನ್ನು ಅಭ್ಯಸಿಸಿಕೊಳ್ಳಬೇಕಾಗಿದೆ. ಕತೆಗೆ ಸಾಹಿತ್ಯಿಕ ರೂಪ, ಜೀವನದೃಷ್ಟಿ, ಕಲಾತ್ಮಕತೆ ರೂಪಿಸಿದ್ದು, ಸಂಸ್ಕೃತಿಯನ್ನು ಹೊಸರೂಪಕ್ಕೆ ಅಳವಡಿಸಿಕೊಂಡ ಕ್ರಮ, ಕಥಾವಸ್ತುವಿಗೆ ಪೌರಾಣಿಕ, ಜಾನಪದೀಯ, ಐತಿಹಾಸಿಕ, ಸಾಮಾಜಿಕತೆಯನ್ನು ಬಳಸಿಕೊಂಡಿದ್ದು ಹಾಗೂ ಮಾಸ್ತಿ ಅವರಲ್ಲಿ ಕಂಡುಬರುವ ಸುಧಾರಣಾವಾದಿತ್ವವನ್ನು ನಾವು ಅಲ್ಲಗಳೆಯಲು ಸಾಧ್ಯವಿಲ್ಲ.

ಗೊರೂರು ರಾಮಸ್ವಾಮಿ ಅಯ್ಯಂಗಾರರ ಕತೆಗಳ ಮಹತ್ವವನ್ನು ನಾವು ಆ ಕತೆಗಳ ಓದಿನ ಮೂಲಕವೇ ತಿಳಿದುಕೊಳ್ಳಬೇಕು. ವೈಯ್ಯಾರಿ ಕತೆಯು ವಿಧವಾ ವಿವಾಹ ಸಮಸ್ಯೆಯನ್ನು ಕುರಿತದ್ದು, ಭೂತಯ್ಯನ ಮಗ ಅಯ್ಯು ಕತೆ ಜನ

ಮಾನಸದಲ್ಲಿ ಅತ್ಯಂತ ಹೆಸರಾಗಿದೆ. ಇಲ್ಲಿ ಶಿರಾತ್ರಿ, ಉಸುಬು, ಕಮ್ಮಾರ, ವೀರಭದ್ರ ಚಾರಿ, ಗರುಡ ಗಂಭದ ದಾಸಯ್ಯ, ಬೆಸ್ತರ ಕರಿಯ ಗೋಪುರದ ಬಾಗಿಲು, ಸಂಕಲನಗಳ ವಿಮರ್ಶೆ ಇದೆ. ಕನ್ಯಾಕುಮಾರಿ ಮತ್ತು ಇತರ ಕತೆಗಳು ಸಂಕಲನದಲ್ಲಿ ಜನಪದದ ಆಶ್ರಯವನ್ನು ಗೊರೂರು ಮಾಡಿದ್ದಾರೆ.

ಆನಂದರ 'ನಾನು ಕೊಂದ ಹುಡುಗಿ' ಕತೆಗಾರರ ಪ್ರೌಢಿಮೆಯನ್ನು ದಾಖಲಿಸಿದ ಕತೆ. ಇಲ್ಲಿ ಬಸವಿ ಬಿಡುವ ಪದ್ಧತಿ ಅದರ ಹಿನ್ನೆಲೆಯ ಮೂಢನಂಬಿಕೆ ಹೆಣ್ಣಿನ ಶೋಷಣೆ ಹಾಗೂ ಪಾತ್ರಗಳ ಮನೋತಾಕಲಾಟ ಕಂಡುಬರುತ್ತದೆ. ಬದುಕು ವೇಶ್ಯೆಯೊಬ್ಬಳ ಜೀವನವನ್ನು ವಸ್ತುವಾಗಿ ವುಳ್ಳದ್ದು, ಹಸಿವು ಹೆಣ್ಣನ್ನು ಈ ಹಂತಕ್ಕೆ ದೂಡುತ್ತದೆ.

ಕೊಡಗಿನ ಗೌರಮ್ಮನವರ ಕತೆಗಳಲ್ಲಿ ಬರುವ ಬಾಲ್ಯವಿವಾಹ, ವಿಧವಾ ವಿವಾಹ, ವರದಕ್ಷಿಣೆ ಪಿಡುಗು, ಬ್ರಾಹ್ಮಣರಲ್ಲಿರುವ ಆಚರಣೆಯ ಅಡೆತಡೆಗಳು ಅದನ್ನು ಸ್ತ್ರೀ ನೋಡುವ ಕ್ರಮವೇನು ಎಂಬುದನ್ನು ಅವರ ಪುನರ್ ವಿವಾಹ, ಆಹುತಿ, ಅದೃಷ್ಟದ ಆಟ, ನನ್ನ ಮದುವೆ, ಕೆಲವು ಕಾಗದಗಳು ಮೊದಲಾದ ಕತೆಗಳ ಮೂಲಕ ಅದರ ಮಹತ್ವವನ್ನು ವಿಮರ್ಶಕರು ಕನ್ನಡ ಸಾಹಿತ್ಯಲೋಕಕ್ಕೆ ತಿಳಿಸಿದ್ದಾರೆ.

ಶ್ಯಾಮಲ ಬೆಳಗಾಂವಕರ ಅವರ ಹೂಬಿಸಿಲು, ಹೊಂಬಿಸಿಲು, ಸಂಕಲನಗಳಲ್ಲಿನ ಕತೆಗಳು ಬದುಕಿನ ವೈವಿಧ್ಯಮಯ ವಿಸ್ತಾರ, ಸಾಮಾಜಿಕ ಪದ್ಧತಿಗಳು, ವ್ಯಕ್ತಿಗಳಲ್ಲಿನ ದುರಾಸೆ, ಸ್ವಾರ್ಥ ಮೊದಲಾದ ಅಂಶವನ್ನು ಇಲ್ಲಿ ಗಮನಿಸಬಹುದಾಗಿದೆ.

ಕುವೆಂಪುರವರ ಆರಂಭಿಕ ಕತೆಗಳ ಮೇಲೆ ಠಾಕೂರರ ಕತೆಗಳ ಪ್ರಭಾವವಿರುವುದನ್ನು ಗುರುತಿಸಿ, ಕುವೆಂಪು ಅವರ ಹೋಳಿಗೆ ಪ್ರತಿಜ್ಞೆ, ಆರಾಣೆ ಮೂರು ಕಾಸು, ಯಾರು ಅರಿಯದ ವೀರ, ಸಾಲದ ಮಗು, ನನ್ನ ದೇವರು, ಧನ್ವಂತರಿ ಚಿಕಿತ್ಸೆ ಕತೆಗಳ ಹಿನ್ನೆಲೆಯಲ್ಲಿ ಕತೆಗಳ ಮಹತ್ವವನ್ನು ಅರ್ಥೈಸಬಹುದಾಗಿದೆ.

ಕೊರಡ್ಕಲ್ ಶ್ರೀನಿವಾಸರ ಧನಿಯರ ಸತ್ಯನಾರಾಯಣ ಪ್ರಗತಿಶೀಲ ಸಾಹಿತ್ಯದ ಪ್ರಮುಖ ಉದಾಹರಣೆಯಾಗಿದೆ.

ಬಸವರಾಜ ಕಟ್ಟೀಮನಿಯವರ "ಬೂಟ್ ಪಾಲಿಸ್ ಮಕ್ಕಳ ಪಾಪಗ್ರಸ್ಥ ಬಾಳಿನ ಚಿತ್ರವನ್ನು ಹೊಂದಿದೆ".

ನಿರಂಜನರ ಕೊನೆಯ ಗಿರಾಕಿ ಇಡೀ ಕನ್ನಡ ಸಾಹಿತ್ಯದ ಕಥಾ ಪ್ರಕಾರಗಳಲ್ಲಿಯೇ ಮೇರುಮಟ್ಟದ್ದು. ಇಲ್ಲಿನ ತಂತ್ರಯೋಜನೆ ಮಹತ್ವವಾಗಿದೆ. ಜನ

ಓಡಾಡುವ ಸರ್ಕಲ್, ಕಾಣಿಯ ದೇಹ ಅದರ ಕೆಟ್ಟ ವಾಸನೆ ಗಿಡುಗದ ಪ್ರತಿಮೆ ಕತೆಯ ಆರಂಭದ ಹಾಗೂ ಕೊನೆಯ ಸಾಲುಗಳು ಓದುಗನನ್ನು ಜಾಗೃತಗೊಳಿಸುತ್ತದೆ.

ನವ್ಯ ಸಾಹಿತ್ಯದ ಅಸ್ತಿತ್ವವಾದ, ಅಸಂಗತವಾದ, ಏಕಾಂಗಿತನ ವಿದೇಶಿ ಸಂಸ್ಕೃತಿಯ ಪ್ರಭಾವ, ಆಂಗ್ಲ ಶಿಕ್ಷಣದ ಮಹತ್ವ ಮೌಢ್ಯತೆಯನ್ನು ಮೀರುವ ಪ್ರೌಡಿಮೆ ಸಮಾಜ ಸುಧಾರಣೆಯಲ್ಲಿನ ವೈಫಲ್ಯತೆ ಮೊದಲಾದ ನವ್ಯದ ಆಶಯಗಳ ಹಿನ್ನೆಲೆಯಲ್ಲಿ ಅನಂತಮೂರ್ತಿಯವರ ಪ್ರಶ್ನೆ, ಮೌನಿ, ಎಂದೆಂದು ಮುಗಿಯದ ಕತೆ ಹಾಗೂ ಮೂರು ದಶಕದ ಕತೆಗಳು ಸಂಕಲನದ ಕತೆಗಳನ್ನು ಇಲ್ಲಿ ಚರ್ಚೆಗೆ ಒಳಪಡಿಸಿದ್ದಾರೆ.

ಕಾದಂಬರಿಕಾರರಾಗಿ ಪ್ರಸಿದ್ಧರಾದ ಶಿವರಾಮ ಕಾರಂತರು ಬರೆದ 'ಹಸಿವು', 'ಹಾವು' ಮತ್ತು 'ತೆರೆಮರೆಯಲ್ಲಿ' ಅಂದಿನ ದಿನಮಾನಗಳಲ್ಲಿ ಹೆಚ್ಚು ಚರ್ಚೆಗೆ ಒಳಗಾಗಿದೆ.

ಕನ್ನಡಕ್ಕೆ ಭಾಷಾಂತರಗೊಂಡ ಕಥೆಗಳ ಮಹತ್ವ– ಸೃಜನಶೀಲ ಸಾಹಿತ್ಯ ಪ್ರಕಾರಕ್ಕೆ ಸೇರಿದ ಕತೆಗಳ ಸಾಲಿನಲ್ಲಿ ಕನ್ನಡಕ್ಕೆ ಭಾಷಾಂತರದ ಮೂಲಕ ಪ್ರವೇಶಪಡೆದ ಕತೆಗಳು ಇವೆ. ಆದರೆ ಅವು ಕನ್ನಡದ ಜನಮಾನಸವನ್ನು ಹೊಕ್ಕುವಲ್ಲಿ ಸಫಲತೆ ಕಂಡದ್ದು ಬಹುಕಡಿಮೆ. ಒಂದೆರೆಡು ಉದಾಹರಣೆಗಳನ್ನು ಈ ಹಿನ್ನೆಲೆಯಲ್ಲಿ ನೋಡಬಹುದಾಗಿದೆ. ಮಾಸ್ತಿಯವರ ಬರವಣಿಗೆಯಲ್ಲಿ ಪತ್ರವೂ ಸಹ ಕತೆಯಾಗುತ್ತದೆ.

'ವಿಚಿತ್ರ ಪ್ರೇಮ' ಕತೆಯಲ್ಲಿ ವಿದೇಶಿ ಸಂಸ್ಕೃತಿಯ ಜೀವನಚಿತ್ರಣವನ್ನು ಕಾಣಬಹುದಾಗಿದೆ. ಚಾಚ್ ಲೈಚ್ ಮತ್ತು ಎಮಿಲಿ ದಂಪತಿಗಳು ಚಾಚ್ ಲೈಚ್ ಒಬ್ಬ ಯೋಧ. ಸದಾ ಹೊರಗೆ ದುಡಿಯುತ್ತಿದ್ದುದನ್ನು ಎಮಿಲಿ ಬುದ್ಧಿವಂತಳು ಆಕೆ ತನ್ನ ಬೌದ್ಧಿಕ ಚಿಂತನೆಗೆ ಸಮನಾದ ವಾಲ್ಟೆರ್ ನನ್ನು ಪ್ರೇಮಿಸುತ್ತಾಳೆ. ಅನಂತರ ಲ್ಯಾಂಟಕ್ಸ್ ಎಂಬ ಯುವಕನ ಮೋಹ, ರೂಪಕ್ಕೆ ಶರಣಾಗಿ ಅವನಿಂದ ಮಗು ಪಡೆಯುತ್ತಾಳೆ. ತಾನು ಅನಾರೋಗ್ಯದಿಂದ ಸಾಯುವ ಹಂತದಲ್ಲಿದ್ದಾಗ ಪುನಃ ವಾಲ್ಟೆರ್ ನ ಆದರ್ಶ ಸಾಮಿಪ್ಯ ಬಯಸುತ್ತಾಳೆ. ಭಾರತೀಯ ಹಿನ್ನೆಲೆಯಲ್ಲಿ ಈ ಕಥಾವಸ್ತುವಿಗೆ ಮಾನ್ಯತೆ ಇಲ್ಲ.

'ಕೊನೆಷ್ಟೈ ಕತೆಗಳು' – ಗೊರೂರರು ಕನ್ನಡಕ್ಕೆ ತಂದ ಅನುವಾದಿತ ಕೃತಿ. ತಮಿಳು ಲೇಖಕ ಕೊನೆಷ್ಟೈ ಅವರ ಹದಿನೆಂಟು ಕತೆಗಳ ಅನುವಾದ ಈ ಕೃತಿ. ಜ್ಯೋತಿಷ್ಯ, ಕಮೀಷನರ್ ಕೊರಗು, ಕತೆ ಬರೆಯುವ ರೀತಿ ಅರವತ್ತು, ಮೂವರು, ಅರ್ಧ ಮುಗಿದ ಕತೆಗಳು, ಹಟಮಾರಿ, ಪತ್ತೇದಾರಿ, ಊರ್ವಶಿ, ಯಾಗಭಂಗ,

ಉದ್ಯೋಗ, ಸಾವಿರದ ಎರಡನೆ ಕಥೆ, ಸಂಗೀತ, ತಾರಾಪೂಜೆ, ಅರ್ಧ ಮುಗಿದ ಕಥೆಗಳು–2, ವನಮಾಲಾ, ಕುತ್ತಾಲಾಂ, ಸಂಸಾರ, ಊರ್ವಶಿಯ ಶಾಪ ಮೊದಲಾದವು ಇಲ್ಲಿನ ಕಥೆಗಳು. ಕತೆಗಾರನದು ಹಾಸ್ಯದೃಷ್ಟಿ, ಹಾಸ್ಯವೇ ಇಲ್ಲಿನ ಪ್ರಧಾನ ವಸ್ತು.

ಆರಂಭದ ಕನ್ನಡದ ಯಾರೇ ಲೇಖಕರ ಕತೆಗಳ ವಸ್ತು, ಕುಟುಂಬ, ಬಡತನ, ನಿರುದ್ಯೋಗ, ಹೆಣ್ಣಿನ ಬವಣೆ, ಕೌಟುಂಬಿಕ ಸಂಬಂಧಗಳ ವಿವಿಧ ಮುಖಗಳು, ಆದರ್ಶದ ನಡೆ, ಶೌರ್ಯ, ಶೃಂಗಾರ, ಧರ್ಮ, ಸ್ನೇಹ, ಕಲಹ, ಕುತಂತ್ರ, ಮೂಢನಂಬಿಕೆ, ವಿವಾಹದ ಸುತ್ತಲಿನ ಘಟನಾವಳಿಗಳು. ಆದರೆ ನವ್ಯದಲ್ಲಿ ಕಥಾವಸ್ತುವಿಗೆ ಹೊಸ ಘಟನೆಗಳ ಸೇರ್ಪಡೆಯಾಗಿದೆ. ಕಥಾವಸ್ತುವಿನ ಆಯ್ಕೆಯಲ್ಲಿ ಹೊಸತನವಿದೆ. ವಿದೇಶಿ ಜೀವನಶೈಲಿ, ಉನ್ನತ ಶಿಕ್ಷಣ, ಆಲೋಚನಾ ಕ್ರಮದಲ್ಲಿನ ಭಿನ್ನತೆ, ಸಮಾಜ ಸುಧಾರಣೆಯ ಜೊತೆಗೆ ತನ್ನ ಅಸ್ತಿತ್ವದ ಹುಡುಕಾಟ, ಅಸಂಗತೆ, ಏಕಾಂಗಿತನ, ಉನ್ನತವಾದ ಆಲೋಚನಾ ಕ್ರಮ ಅದರೊಂದಿಗೆ ಅಶ್ಲೀಲವೆನಿಸುವ ಒಂದಕ್ಕಿಂತ ಹೆಚ್ಚಿನ ಸಂಬಂಧಗಳು ಕಂಡುಬರುತ್ತವೆ.

ಆರಂಭದ ದಲಿತ ಬಂಡಾಯ ಸಾಹಿತ್ಯದ ಒಳನೋಟಗಳು ವ್ಯಕ್ತಿಯ ಜೊತೆಗೆ ತನ್ನ ಸಮುದಾಯದ ಅಭಿವೃದ್ಧಿಯನ್ನು ಗುರಿಯಾಗಿಸಿಕೊಂಡಿತ್ತು. ಶಿಕ್ಷಣದ ಹಂಬಲ ಸಮಾನತೆಯ ಕಳಂಕ, ಉದ್ಯೋಗದ ನಿರೀಕ್ಷೆ, ಮೌಢ್ಯತೆಯ ವಿರೋಧ, ವೈಚಾರಿಕತೆಯ ಪ್ರವೃತ್ತಿ ಮೊದಲಾದವುಗಳು ಈ ಬಗೆಯ ಕಥೆಗಳಲ್ಲಿ ವಸ್ತುವಾಗಿ ದ್ದನ್ನುನೋಡಬಹುದಾಗಿದೆ. ಆದರೆ ಕಥೆಗಾರರು ವಸ್ತುವಿನೊಂದಿಗೆ ಬಳಸಿದ ನವ್ಯ ಕತೆಗಾರರ ಕಥೆಗಳ ಸಂದರ್ಭದಲ್ಲಿ ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲರ ಕತೆಗಳನ್ನು ಚರ್ಚಿಸದೆ ಮುಂದುವರೆಯಲು ಸಾಧ್ಯವಿಲ್ಲ. ಮುಂಬೈ ಜೀವನದೊಂದಿಗೆ ತಮ್ಮ ಹುಟ್ಟೂರಿನ ಮೂಲವನ್ನು ನೆನಪಿಸಿಕೊಳ್ಳುವ ಈ ಬಗೆಯ ಜೀವನಶೈಲಿ ನವ್ಯ ಕತೆಗಳ ಮೂಲ ದ್ರವ್ಯವಾಗಿದೆ. ಇವರ ಕತೆಗಳನ್ನು ಅಧ್ಯಯನ ಮಾಡುವಾಗ "ಒಂದು ಸಂಸ್ಕೃತಿಯ ಸಂಕೋಚನಗಳು ಸೆಟೆದುಕೊಳ್ಳುವ ಮತ್ತು ಕಳಚಿಕೊಳ್ಳುವ ಬಗೆಯನ್ನು ಒಂದು ವಿಶಿಷ್ಟ ವ್ಯಕ್ತಿ ಮತ್ತು ಆವರಣದ ಸಂದರ್ಭದಲ್ಲಿ ಈ ಕತೆಯಲ್ಲಿ ಶೋಧಿಸಲಾಗಿದೆ" (ಜಿ.ಎಚ್. ನಾಯಕ, ಅನಿವಾರ್ಯ, ಪು. 61) ಮಾತು ಅಕ್ಷರಷಃ ಸರಿಯಾಗಿದೆ. ಭಾಷೆ ಸಮಾಜಕ್ಕೆ ತಮ್ಮ ಸ್ಪಷ್ಟವಾದ ನಿಲುವನ್ನು ವ್ಯಕ್ತಪಡಿಸಿತು.

ಇಂದಿನ ಹೊಸ ತಲೆಮಾರಿನ ಕತೆಗಾರರು ಭೂಮಿಯ ಮೇಲಿನ ಆಕಾಶದ ಅಡಿಯ ಎಲ್ಲವನ್ನು ತಮ್ಮ ಬರಹದ ವಸ್ತುವಾಗಿಸಿಕೊಂಡಿದ್ದಾರೆ. ಇಲ್ಲಿ ಎಲ್ಲಾ ಕಾಲಘಟ್ಟಗಳ ಸಾಹಿತ್ಯಿಕ ಮನೋಧರ್ಮಗಳಿವೆ. ಸ್ವತಂತ್ರವಾದ ಆಲೋಚನಾ

ಕ್ರಮವಿದೆ. ಭಾಷೆಯ ಬಂಧದಲ್ಲಿ ಏಕಕಾಲದಲ್ಲಿ ಗ್ರಂಥಸ್ಥ ನುಡಿ ಹಾಗೂ ಮೌಖಿಕ ಪರಂಪರೆಯ ಆಡುಭಾಷೆಯ ಬರಹವು ಕಂಡುಬರುತ್ತಿದೆ.

ಬದಲಾದ ಕಾಲಘಟ್ಟ, ಮನೋಧರ್ಮಗಳಿಗೆ ಅನುಗುಣವಾಗಿ ಹೊಸ ಕತೆಗಾರರ ಕತೆಗಳೂ ಸಹ ವಿಶ್ವವಿದ್ಯಾನಿಲಯಗಳ ಪಠ್ಯಕ್ಕೆ ಪ್ರವೇಶವಾಗಬೇಕಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಅಮೂರ ಜಿ. ಎಸ್. (1986). ಸಮಕಾಲೀನ ಕತೆ, ಕಾದಂಬರಿ ಹೊಸ ಪ್ರಯೋಗಗಳು. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
2. ನಾಗರಾಜ ಡಿ. ಆರ್. (1987). ಶಕ್ತಿ ಶಾರದೆಯ ಮೇಳ. ಅಕ್ಷರ ಪ್ರಕಾಶನ. ಸಾಗರ.
3. ನಾಯಕ ಜಿ. ಎಚ್. (1988). ಅನಿವಾರ್ಯ. ಅಕ್ಷರ ಪ್ರಕಾಶನ. ಸಾಗರ.
4. ನಾಗಭೂಷಣ ಡಿ. ಎಸ್. (1990). ಮಾಸ್ತಿ ಸಾಹಿತ್ಯ ಸಮಗ್ರ ದರ್ಶನ. ಸಂವಾದ ಪ್ರಕಾಶನ. ಮಲ್ಲಾಡಿಹಳ್ಳಿ.
5. ಪ್ರಸಾದಸ್ವಾಮಿ ಎಸ್. (2011). ಸಣ್ಣಕತೆ ಸ್ವರೂಪ ವಿನ್ಯಾಸ. ಕಣ್ವ ಪ್ರಕಾಶನ. ಬೆಂಗಳೂರು.
6. ಬರಗೂರು ರಾಮಚಂದ್ರಪ್ಪ (ಯೋಜನ ಸಂಪಾದಕರು). (2017). ಕನ್ನಡ ಸಾಹಿತ್ಯ ಸಂಗಾತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.